## ಕಳೆದ ಸಂಚಿಕೆಯಲ್ಲಿ



ಜಗ ಜನನಿ ಪೊಲೀಸ್ ಠಾಣೆಗೆ ಹೊಸತಾಗಿ ಬಂದ ಎಸ್‌ಐ. ಮಾಯಣ್ಣ ಪ್ರಾಮಾಣಿಕತೆಗೆ, ದಿಟ್ಟತನಕ್ಕೆ ಹೆಸರಾದವನು. ತನ್ನ ಮನೆಗೆ ಬಂದು ರಿಪೋರ್ಟ್ ಮಾಡಿಕೊಳ್ಳಲಿಲ್ಲ ಎಂದು ರೊಚ್ಚಿಗೆದ್ದ ಶಾಸಕ ಸಿದ್ದಪ್ಪ ಠಾಣೆಗೆ ಬಂದು ಗಲಾಟೆ ಮಾಡತೊಡಗಿದಾಗ, ಅವನ ರೌಡಿ ಷೀಟರ್ ವಿವರಗಳನ್ನು ಎದುರಿಗಿಟ್ಟ ಮಾಯಣ್ಣ ಕಪಾಳಮೋಕ್ಷ ಮಾಡಿದ್ದ. ಆ ಘಟನೆ ಹೊರಗೆಲ್ಲ ಪ್ರಚಾರವಾಗಿ, ಮಾಯಣ್ಣ ಸಾರ್ವಜನಿಕ ಕುತೂಹಲದ ವ್ಯಕ್ತಿಯಾಗಿದ್ದ. ಬಾಣಂತನಕ್ಕೆ ತವರಿಗೆ ಹೋಗಿದ್ದ ಹೆಂಡತಿ, ಸ್ವಂತ ಮನೆ ಆಗುವವರೆಗೂ ಹಿಂತಿರುಗುವುದಿಲ್ಲವೆಂದು ಪಟ್ಟುಹಿಡಿದಿದ್ದಳು. ಹೆಂಡತಿಯ ಹಟ ಮತ್ತು ಬೇಡಿಕೆಯ ಚಿಂತೆಯಲ್ಲಿದ್ದ ಮಾಯಣ್ಣನಿಗೆ ಸವಾಲೆಸೆಯುವಂತೆ ಕೊಲೆಯ ಘಟನೆಯೊಂದು ಎದುರಾಯಿತು. ರಾಜ್ಯದಲ್ಲಿ ಮನೆಮಾತಾದ ಕಿರುತೆರೆ ನಟಿ ಅಮೃತಾ ಕೊಲೆಯಾಗಿದ್ದಳು. ಸ್ಥಳಕ್ಕೆ ಹೋಗಿ, ಕೊಲೆಯಾಗಿ ಬಿದ್ದಿದ್ದ ಅಮೃತಾಳ ದೇಹವನ್ನು ನೋಡಿ ಮಾಯಣ್ಣ ಕಂಪಿಸಿದ. ಅಷ್ಟು ಭೀಕರವಾಗಿತ್ತು ಕೊಲೆಗಾರ ಎಸಗಿದ ಕ್ರೌರ್ಯ.

ಎಸ್ಟೇಟ್ ಮ್ಯಾನೇಜರ್ರು. ಇನ್ಯಾರು ಬಂದಂಗ್ ಕಾಣೆ.'

'ಬಂದವ್ರು ಯಾರಾದರೂ ಇಲ್ಲೇ ಉಳ್ಕೊಳದುಂಟಾ?'

'ಇಲ್ಲ ಬಿಡಿ.'

'ಈ ರವಿ ಅಂದ್ರಲ್ಲಾ, ಅದ್ಯಾರು?'

'ಎಸ್ಟೇಟ್‌ನಲ್ಲಿರೋದು, ಅಕ್ಕಾವ್ರ ಸ್ವಂತ ತಾಯಿ ಅಲ್ಲ. ಮಲತಾಯಿ. ಅವ್ರ ತಮ್ಮಾನೇ ರವಿ. ಕೆಲಸ ಕಾರ್ಯ ಇಲ್ಲ. ಏನೂ ಲಾಯಕ್ಕಿಲ್ಲ ಅಂತ ಯೇಳ್ತಾಯಿದ್ರು ಅಕ್ಕ. ಅವ್ರೂನು ಎಸ್ಟೇಟಲ್ಲೇ ವಾಸ. ಆಗಾಗ ಬಂದು ಕಾಫಿ ಬೀಜ, ಮೆಣುಸ್ಕಾಳು, ಏಲಕ್ಕಿ ಇನ್ನಾ ಎಸ್ಟೇಟಗ್ ಏನೇನ್ ಬೆಳೀತರೊ ಅದೆಲ್ಲಾ ತರ್ತಾರೆ. ಇಲ್ಲಿ ಅಕ್ಕಾವ್ರು ಅವರ್ಗೆ ಇವರ್ಗೆ ಅಂತ ಕೊಡ್ತಾಯಿದ್ರು.'

'ಸರಿ, ಡೈರೆಕ್ಟರ್ ಸಾರ್ ಅಂದ್ರಲ್ಲಾ, ಅದೂ.'

'ಅವ್ರು ಅಗ್ನಿಜಾಲ ಡೈರೆಕ್ಟ್ರು.'

'ಅದ್ಸರಿ, ನಿಮ್ಮೆಜಮಾನ್ರು ಎಲ್ಲಿದ್ದಾರೆ ಈಗ?'

'ವೋದ್ನೆ ವಾರ ಅದೇನ್ಕೋ ಕೋಲಾರಕ್ಕೋದವ್ರೂ ಬರ್ತಾ ಕೊರೊನಾ ಅಂಟುಸ್ಕೊಂಡ್ ಬಂದ್ರೂ. ಅಂಗಿಂದಂಗೇ ಆನಂದ ಆಸ್ಪತ್ರೆಗೆ ಅಡ್ಮಿಟ್ ಮಾಡುದ್ವಿ. ನಾಳೆ ಡಿಸ್‌ಚಾರ್ಜ್ ಅಂತಿದ್ರೂ.'

'ನಿಮ್ಮಕ್ಕಂಗೆ ಯಾರ ಜೊತೆಗಾದ್ರು ಜಗಳ, ಮನಸ್ತಾಪ ಏನಾದರು ಇತ್ತಾ?'

'ಇಲ್ಲ ಬಿಡಿ. ಅವಗವಗ ಜಯಂತಣ್ಣನ ಜೊತೆ ಕಿತ್ತಾಡ್ಕೊಂಡಿರ್ತಿದ್ರು ಅಷ್ಟೇ. ಇವತ್ತು ಬೆಳಿಗ್ಗೆ ಮಾತ್ರ ಸಾನೆ ಜೋರ್ಜೋರಾಗೆ ನಡಿತೇನೊ. ನಾನು ಕೆಳಗಿನ್ ಮನೇದ್ ಬಟ್ಟೆ ಒಣಗಾಕಕೆ ಮೇಲೆ ಬಂದಿದ್ದೆ. ಎಂದೂ ಕಂಡಿರ್ಲಿಲ್ಲಾ ಆ ಪಾಟ ಜಗಳಾವಾ. ನಾನು ಕಾಣ್ದವ್ರಂಗೆ ಕೆಳುಕ್ಕೋಗ್ಬುಟ್ಟೆ. ಎಂಗೂ ಒಲೆ ಮೇಲೆ ಅನ್ನಕ್ಕಿಟ್ಟಿದ್ದೆ, ಇನ್ನೆಲ್ ಸೀದೋಯ್ತದೊ ಅಂತ. ಅಂಗೂ ಅಜ್ಜಿಗೇಳನಾ ಅನ್ಕೊಂಡೆ – ಮೇಲೆ ಏನೋ ಮಾರಾಮಾರಿ ನೆಡಿತಾಯ್ತೇ ನೋಡಿ ಅಂತ ಅಷ್ಟೊತ್ಗೆ ಅವರ ಮಗಂದೂ ಫೋನ್ ಬಂತು. ಸುಮ್ನಾಗೋದೆ.'

'ನಿಮ್ಮಕ್ಕಂಗೆ ಜಯಂತಣ್ಣ ಏನಾಗ್ಬೇಕು?'

'ಎಂಟು ತಿಂಗ್ಳಿಂದುಕ್ಕೇ ಅವರಿಬ್ರೂ ಮದ್ವೇ ಮಾಡ್ಕೊಂಬೇಕು ಅಂತ ಮಾತಾಡ್ಕೊಂಡಿದ್ರಂತೆ.'

'ಹೇಗೆ? ಇಬ್ಬರೂ ಹೊಂದ್ಕೊಂಡು ಚೆನ್ನಾಗಿದ್ರಾ?'

'ಚೆನ್ನಾಗೇನೋ ಇದ್ರು. ಆದ್ರೆ ಜಯಂತಣ್ಣ ಸಾನೆ ಕೋಪಿಸ್ಟ್ರು. ಒಂದೊಂದ್ಸಾರಿ ದೆವ್ವ ಮೆಟ್ಕೊಂಡಂಗಾಡವ್ರು. ಆಮೇಲೆ ಇನ್ನೊಂದಿನ ಅಂಗೇ ಒಂದಾಗ್ಬುಡವ್ರು...'

'ಏನು ವಿಷಯಕ್ಕೆ ಜಗಳ ಮಾಡ್ತಿದ್ರು?'

'ಅದು ನನಗೆ ತಿಳೀದೂ.'

'ಎಷ್ಟು ಗಂಟೆಗೆ ಕೆಲಸಕ್ಕೆ ಬರ್ತೀರ?'

'ನಾನು ದಿನಾನು ನನ್ ಮಗೀನ ಅಂಗನವಾಡಿಗೆ ಬಿಟ್ಟು ಯೆಂಟ್ಗಂಟೆಗೇ ಬರೋದು. ಕೆಳಗೆ ಅಜ್ಜಿ ಮನೆ ಕೆಲಸ ಮುಗುಸ್ಕೊಂಡು, ಅನ್ನೊಂದು ಅನ್ನೊಂದುವರೆ ಮೇಲೆ, ಅಕ್ಕಾವ್ರ ಮನೆಗೆ ಹೋಗೋದು.'

'ಇವತ್ತು ಎಷ್ಟು ಗಂಟೆಗೆ ಹೋದ್ರಿ ಮೇಲಕ್ಕೆ.'

'ಅದೇ ಮಾಮೂಲಿ. ತಾತ ಅನ್ನೊಂದ್ ಗಂಟೆಗೆ ಟೀವಿ ನ್ಯೂಸ್ ನೋಡಕ್ಕೆ ಕುಂತ್ಕೊಂತಾರೆ. ಅವ್ರುಗೆ ಕಾಫಿ ಕೊಟ್ಟು ಅಕ್ಕನ ಮನೆಗೆ ವೋದೆ.'

'ಅಲ್ಲಿ ಯಾರಿದ್ರು, ಏನ್ ನೋಡುದ್ರಿ, ಏನಾಯ್ತು. ಹಾಗೆನೇ, ಒಂದು ಬಿಡ್ದಂಗ್ ಹೇಳಿ ನೋಡೋಣ.'

'ಮೇಲುಕ್ ವೋದ್ನ, ಅಕ್ಕಾವ್ರ ಮನೆ ಬಾಗ್ಲು ಸ್ವಲ್ಪ ಮುಂದಕ್ಕೆ ತಳ್ದಂಗಿತ್ತು. ಬಾಗ್ಲೂ ಅಂಗೆ ವಾರೆ ಮಾಡಿ ಒಳುಗ್ ನೋಡಿದ್ದಷ್ಟೇ. ಒಂದೇ ಉಸುರ್ಗೆ ಕೂಗ್ಕೊಂಡ್ ಅದೆಂಗ್ ಕೆಳಕ್ಕೆ ಬಂದ್ನೋ ಕಾಣೆ, ಅಲ್ಲೇ ಬೈಕ್ ಆಕ್ಕೊಂಡು ಓಗ್ತಾಯಿದ್ದ ನಿಮ್ ಪೋಲೀಸ್ನವ್ರಗೆ ಯೇಳಿದ್ದಷ್ಟೇ ಗ್ಯಾಪ್ಕ ಇರೋದು. ಅಮೇಲೆ ಅಂಗೇ ಗ್ಯಾನ ತಪ್ಪಿ ಬಿದ್ದೋದ್ನಾ, ಮತ್ತೆ ಗ್ಯಾನ ಬರೋ ವತ್ಗೆ ಅಜ್ಜಿ ಮುಕುದ್ಮೇಲೆ ನೀರು ಚುಮ್ಮುಸ್ತಾಯಿದ್ರು.'

ಈ ಮಾತುಕತೆ ಸರಾಗವಾಗಿ ನಡೆದದ್ದಂತೂ ಅಲ್ಲ. ಉದ್ದಕ್ಕೂ ಮಧ್ಯೆ ತಡೆತಡೆದು... ಅಳುತ್ತಾ... ಬಿಕ್ಕಳಿಸುತ್ತಾ... ಆ ಘೋರ ದೃಶ್ಯ ಮನಸಿನಲ್ಲಿ ಮರುಕಳಿಸಿದಾಗ ಬೆಚ್ಚುತ್ತಾ... ಮೌನಕ್ಕೆ ಜಾರುತ್ತಾ ನಡೆದ, ಈ ಮರುನಿರೂಪಣೆ ಕಮಲಾಳನ್ನು ಇನ್ನಷ್ಟು ಗಾಸಿಗೊಳಿಸಿ, ಕುಂಟುತ್ತಾ ಸಾಗಿದ ಪ್ರಶ್ನೋತ್ತರವಾಗಿತ್ತು. ಅವಳಿಂದ ಇಷ್ಟು ವಿವರಗಳನ್ನು ಹೊರತೆಗೆಸಲು ಸಂತೈಸಿ, ಸಮಾಧಾನಿಸಿ ಸಾಕು ಸಾಕಾಗಿತ್ತು ಮಾಯಣ್ಣನಿಗೆ.

'ಸರಿ ಕಮಲಮ್ಮ, ಮತ್ತೆ ಏನಾದರೂ ಬೇಕು ಅಂದ್ರೆ ಬಂದು ಮಾತಾಡ್ತೀವಿ.'

'ಕುಮಾರ್, ಮೇಲೆ ಅಮ್ಮು ಮತ್ತು ಜಯಂತ್ ಮಧ್ಯೆ ಜಗಳ ಆಗ್ತಿರಬೇಕಾದರೆ, ಆ ಅಜ್ಜಿ ಸತ್ಯವತಿ ಇದ್ದಾರಲ್ಲ ಅವರಿಗೆ ಬೆಳಿಗ್ಗೆ ಅಮೆರಿಕದಲ್ಲಿರುವ ಅವರ ಮಗನಿಂದ ಫೋನ್ ಕಾಲ್ ಬಂದಿತ್ತಂತೆ. ಆ ಟೈಮ್‌ನ ಅವರ ಮೊಬೈಲ್‌ನಿಂದ ನೋಟ್ ಮಾಡ್ಕೊಳ್ಳಿ.'

'ಯೆಸ್ ಸಾರ್.'

ಅಷ್ಟರಲ್ಲಿ ವಿನಯ್‌ನಿಂದ ಫೋನ್ ಕರೆ.

'ಸಾರ್ ಫೋಟೊಗ್ರಾಫರ್, ಫಿಂಗರ್ ಪ್ರಿಂಟ್ ಎಕ್ಸ್‌ಪರ್ಟ್ಸ್, ಡಾಗ್ ಹ್ಯಾಂಡ್ಲರ್ಸ್ ಎಲ್ಲಾ ಇಲ್ಲೇ ಟೆರೇಸ್ ಮೇಲೆ ಬಂದಿದ್ದಾರೆ.'

'ಸರಿ ಬಂದೆ.'

'ಸಾರ್, ನನಗೆ ನೈಟ್ ಡ್ಯೂಟಿ ಬಿದ್ದರೆ, ಸಾಮಾನ್ಯವಾಗಿ ಬೀಳೋದು ಇದೇ ಬೀಟ್.'

'ಅದಕ್ಕೆ...'

'ಇದು ಸುತ್ತೂ ಅರ್ಧ ಮೈಲಿ ಬ್ಲೈಂಡ್ ಸ್ಪಾಟ್ ಸಾರ್. ಒಂದು ಸಿಸಿಟೀವಿನೂ ಇಲ್ಲ.'

'ಅದನ್ನ ಮುಂದಕ್ಕೆ ನೋಡೋಣ. ಆಮೇಲೆ ಇದೆಲ್ಲಾ ಮುಗುದ್ಮೇಲೆ, ಆನಂದ ಹಾಸ್ಪಿಟಲ್‌ನಲ್ಲಿ ಜಯರಾಮ ಅನ್ನೋ ಕೊರೊನಾ ಪೇಷಂಟ್‌ನ ಒಂದು ವಾರದ ಕಂಪ್ಲೀಟ್ ಡೇ ಟು ಡೇ ಹಿಸ್ಟರಿ. ಅವನ ಫೋನ್ ರೆಕಾರ್ಡ್ ಎಲ್ಲಾ ಚೆಕ್ ಮಾಡಿ, ನನಗೆ ರಿಪೋರ್ಟ್ ಮಾಡಿ. ಸರಿ ನಾನು ಈಗಲೇ ಬಂದೆ, ಟೆರೇಸ್‌ಗೆ.'

'ಯೆಸ್ ಸಾರ್.'

ಮಾಯಣ್ಣ ಕೆಳಗಿನ ಓನರ್ ಮನೆಯಿಂದ ಸೀದಾ ಮೇಲಿನ ಅಮ್ಮು ಮನೆ ಬಾಗಿಲಿಗೆ ಬಂದಿದ್ದ. ಅಲ್ಲೇ ಎಲ್ಲರೂ ಮಾಯಣ್ಣನಿಗಾಗಿ ಕಾಯುತ್ತಿದ್ದರು. ರಸ್ತೆ, ಪ್ರವೇಶಿಕೆ, ಮೆಟ್ಟಿಲು, ತಾರಸಿ ಹೀಗೆ ಹೊರಗಿನ ಎಲ್ಲಾ ಜಾಗಗಳನ್ನು ಇಂಚಿಂಚು ಶೋಧಿಸುತ್ತಾ ಫೋಟೊಗ್ರಾಫರ್ ಆಗಲೇ ತನ್ನ ಕೆಲಸ ಶುರು ಮಾಡಿದ್ದ. ಟ್ರ್ಯಾಕರ್ ಡಾಗ್ ಕತ್ತಿನ ಪಟ್ಟಿಯನ್ನು ಜಗ್ಗಿ ಎಳೆದಾಡುತ್ತಾ ಚಡಪಡಿಸುತ್ತಿತ್ತು. ಫಿಂಗರ್ ಪ್ರಿಂಟ್ ಪರಿಣತ ತನ್ನ ಸಹಾಯಕನ ಒಡಗೂಡಿ, ಬಾಗಿಲ ಹಿಡಿಯನ್ನು ಭೂತಗನ್ನಡಿ ಹಿಡಿದು ನೋಡುತ್ತಿದ್ದ. ಮನೆ ಒಳಗೆ ಪ್ರವೇಶಿಸುವುದಕ್ಕೆ ಯಾರಿಗೂ ಅನುಮತಿ ಕೊಟ್ಟಿರಲಿಲ್ಲ ಮಾಯಣ್ಣ.

'ವಿನಯ್, ಒಳಗೆ ಹೋಗೋದುಕ್ಕೆ ಮುಂಚೆ ನಾನು ಎಲ್ಲಾರ್ಗು ಬ್ರೀಫ್ ಮಾಡ್ಬೇಕು. ಮೊದಲಿಗೆ ಫೊರೆನ್ಸಿಕ್ ಫೋಟೊಗ್ರಾಫರ್‌ನ ಕರೀರಿ.'

'ಹಲೋ ಸಾರ್, ನಾನು ರಾಜೀವ್. ಫೋಟೊಗ್ರಾಫರ್.'